ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಬೆಳಗಾವಿ, ಬುಧವಾರ, ೦೩ ಜೂನ್, ೨೦೨೬ (ಜ್ಯೇಷ್ಠ ೧೩, ಶಕ ವರ್ಷ ೧೯೪೮) BELAGAVI, WEDNESDAY, 03 JUNE, 2026 (JYESTHA 13, SHAKA VARSHA 1948)	ಸಂಚಿಕೆ – ೪೩ Issue - 43

ಭಾಗ ೬ಬಿ

ಬೆಳಗಾವಿ ವಿಭಾಗಕ್ಕೆ ಮತ್ತು ಧಾರವಾಡ, ಹಾವೇರಿ, ಗದಗ, ಬೆಳಗಾವಿ, ವಿಜಯಪುರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು ಶಾಸನಬದ್ಧವಲ್ಲದ ಆದರೆ ಜಮೀನು ಸಂಗ್ರಹಣ ಶಾಸನದ ಮೇರೆಗೆ ಹೊರಡಿಸಿದ ಅಧಿಸೂಚನೆಗಳ ಸಹಿತವಾಗಿ ಸರ್ಕಾರದ ಅಧಿಸೂಚನೆಗಳು

ಪುರಸಭೆ ಕಾರ್ಯಾಲಯ
ನವಲಗುಂದ–೫೮೨೨೦೮
(ಜಿಲ್ಲೆ: ಧಾರವಾಡ, ರಾಜ್ಯ :ಕರ್ನಾಟಕ)

TOWN MUNICIPAL COUNCIL
NAVALGUND–582208
(Dist: Dharwad, State: Karnataka)

Phone:08380-229247, Website: www.navalgundtown.mrc.gov.in email ID: ka.navalagund.tmc@gmail.com

ನಂ: ಪುಸನ/ಕಂ.ವಿ/ವಹಿ/2025–26 ದಿನಾಂಕ: 02–03–2026

ವಾಣಿಜ್ಯ ಮಳಿಗೆಗಳನ್ನು ಬಾಡಿಗೆ ಆಧಾರದ ಮೇಲೆ ವಿತರಣೆ ಷರತ್ತುಗಳ ಉಪವಿಧಿಗಳು–2005
(ಕರ್ನಾಟಕ ಪೌರಸಭೆಗಳ ಅಧಿನಿಯಮ–1964 ನಿಯಮ 324(1)(ಎ) ರಂತೆ)

ನವಲಗುಂದ ಪುರಸಭೆ ಮಾಲ್ಕಿಯ ವಾಣಿಜ್ಯ ಮಳಿಗೆಗಳಲ್ಲಿ ಲೀಜ್ ಅವಧಿ ಮುಕ್ತಾಯಗೊಂಡಿರುವ ಹಾಗೂ ಖಾಲಿ ಇರುವ ವಾಣಿಜ್ಯ ಮಳಿಗೆಗಳನ್ನು ನಿಯಮಾನುಸಾರ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದ್ದು, ಸದರಿ ಮಳಿಗೆಗಳನ್ನು ಹರಾಜು ಮಾಡುವ ಸಂದರ್ಭದಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ–1964 ರ ನಿಯಮ 72 ರಂತೆ ಪ್ರದತ್ತವಾದ ಅಧಿಕಾರದನ್ವಯ ಪುರಸಭೆಯ ಸಾಮಾನ್ಯ ಸಭೆಯ ಠರಾವ ನಂ. 84 ದಿನಾಂಕ: 30–01–2025 ರಂತೆ ಈ ಕೆಳಕಾಣಿಸಿದ ಷರತ್ತುಗಳನ್ನು ಅಳವಡಿಸಿಕೊಳ್ಳಲು ನಿರ್ಣಯಿಸಿದ್ದು ಇರುತ್ತದೆ. ಸದರಿ ಷರತ್ತುಗಳನ್ನು ಹರಾಜಿನಲ್ಲಿ ಅಳವಡಿಸಿಕೊಳ್ಳಲು ಭಾದಿತ ವ್ಯಕ್ತಿಗಳಿಂದ ಆಕ್ಷೇಪಣೆ/ತಕರಾರುಗಳನ್ನು ಅಹ್ವಾನಿಸಲಾಗಿರುತ್ತದೆ. ನಿಗದಿತ ಕಾಲಾವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ಸದರಿ ಕರಡು ಉಪವಿಧಿಗಳನ್ನು ದಿನಾಂಕ: 22–07–2025 ರಂದು ನಡೆದ ಸಾಮಾನ್ಯ ಸಭೆ ವಿಷಯ ನಂ: 11 ರಲ್ಲಿ ಮಂಡಿಸಲಾಗಿ ಠರಾವು ನಂ:21 ರಲ್ಲಿ ಅನುಮೋದಿಸಿದಂತೆ ಈ ಕೆಳಕಾಣಿಸಿದ ಉಪವಿಧಿಗಳನ್ನು ದಿನಾಂಕ:22–07–2025 ರಿಂದ ಅನ್ವಯವಾಗುವಂತೆ ಅಡವಳಿಸಿಕೊಳ್ಳಲಾಗಿದೆ.

1. ಮಳಗೆಯ ಹರಾಜಿನಲ್ಲಿ ಭಾಗವಹಿಸುವವರು ಪ್ರತಿ ಮಳಗೆಯ ಮೇಲೆ ಠೇವಣಿ ಹಣವನ್ನು ನಿಗಧಿತ ಅವಧಿಯಲ್ಲಿ ಭರಣಾ ಮಾಡಿ ಲಲಾವನಲ್ಲಿ ಭಾಗವಹಿಸತಕ್ಕದ್ದು, ಠೇವಣಿ ಹಣವನ್ನು ಭರಣಾ ಮಾಡದೇ ಲಲಾವನಲ್ಲಿ ಭಾಗವಹಿಸುವಂತಿಲ್ಲ.
2. ಬಾಡಿಗೆ (ಲೀಸ್) ಅವಧಿಯು ಮಳಗೆಯನ್ನು ಹಸ್ತಾಂತರ ಮಾಡಿಕೊಂಡ ದಿನಾಂಕದಿಂದ 12 (ಹನ್ನೆರಡು) ವರ್ಷಗಳ ಅವಧಿಗೆ ಮಾತ್ರ ಇರುತ್ತದೆ.
3. ಠೇವಣಿ ಮೊತ್ತವು ಬಡ್ಡಿ ರಹಿತವಾಗಿ ಮರುಪಾವತಿಸುವ ಷರತ್ತಿಗೊಳಪಟ್ಟಿರುತ್ತದೆ.
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಮಳಗೆಗಳಗೆ ಕೇವಲ ಸದರಿ ವರ್ಗದವರು ಮಾತ್ರ ಭಾಗವಹಿಸತಕ್ಕದ್ದು ಮತ್ತು ಆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ನಿಯಮಗಳು ಹಾಗೂ ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
5. ಅಂಗವಿಕಲರಿಗಾಗಿ ಕಾಯ್ದಿರಿಸಿದ ಮಳಗೆಯನ್ನು ಲಾಟರಿ ಮುಖಾಂತರ ಮಾತ್ರ ವಿಲೇವಾರಿ ಮಾಡಲಾಗುವದು. ಸದರೀ ಮಳಗೆಯಲ್ಲಿ ಭಾಗವಹಿಸುವ ಅಂಗವಿಕಲ ಅಭ್ಯರ್ಥಿಯು ಕನಿಷ್ಠ ಶೇ. ೫೦ ರಷ್ಟು ಅಂಗವಿಕಲತೆಯನ್ನು ಹೊಂದಿರತಕ್ಕದ್ದು. ಆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ನಿಯಮಗಳು ಹಾಗೂ ನಿಗದಿತ ನಮೂನೆಯಲ್ಲಿ ಅಂಗವಿಕಲತೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6. ಸಾರ್ವಜನಿಕ ಬಹಿರಂಗ ಹರಾಜು ಮೂಲಕ ಅಂಗಡಿ ಮಳಗೆಗಳನ್ನು ವಿಲೇವಾರಿ ಮಾಡುವಾಗ ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು ಮೊದಲು ಸಾಮಾನ್ಯ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಥವಾ Right Of First Refusal ನ್ನು ಆಯ್ಕೆ ಮಾಡಿಕೊಂಡ ಬಗ್ಗೆ ಲಖಿತವಾಗಿ ಈ ಕಾರ್ಯಾಲಯಕ್ಕೆ ಹರಾಜಿಗೆ 7 ದಿನಗಳ ಮುಂಚಿತವಾಗಿ ತಿಳಯಪಡಿಸತಕ್ಕದ್ದು, ನಿಗಧಿತ ದಿನಾಂಕದೊಳಗೆ ತಿಳಸದಿದ್ದಲ್ಲಿ ಅಂತಹ ಬಾಡಿಗೆದಾರರು Right Of First Refusal ನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವದಿಲ್ಲ ಹಾಗೂ ಅಂತಹ ಬಾಡಿಗೆದಾರರು ಸಾಮಾನ್ಯ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆಂದು ಪರಿಗಣಿಸಲಾಗುವುದು. ಒಂದು ವೇಳೆ ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು Right Of First Refusal ನ್ನು ಆಯ್ಕೆ ಮಾಡಿಕೊಂಡಲ್ಲಿ ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವಾಗ ಅಂತಹ ಬಾಡಿಗೆದಾರರಿಗೆ ಸಾಮಾನ್ಯ ಹರಾಜು ಪ್ರಕ್ರಿಯೆಯಲ್ಲಿ ಅಂತಿಮ ಬಿಡ್ ಮೊತ್ತಕ್ಕೆ Right Of First Refusal ರಂತೆ ಶೇ.5 ರಷ್ಟು ಹೆಚ್ಚಿಗೆ ನಿಗದಿಪಡಿಸಿದ ಮಳಗೆ ಬಾಡಿಗೆಗೆ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗುವದು. ಸದರಿ ನಿಗದಿ ಪಡಿಸಿದ ಮೊತ್ತಕ್ಕೆ ಅಂಗಡಿ ಬಾಡಿಗೆ ಪಡೆಯಲು ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು ಒಪ್ಪದಿದ್ದಲ್ಲಿ ಸಾಮಾನ್ಯ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಯಶಸ್ವಿಯಾದ ಅಂತಿಮ ಬಿಡ್ ದಾರರಿಗೆ ಮಳಗೆಯನ್ನು ಬಾಡಿಗೆಗೆ ನೀಡಲಾಗುವದು.
7. ಬಾಡಿಗೆ ಮೊತ್ತವನ್ನು ಪ್ರತಿ ೩ ವರ್ಷಗಳಗೊಮ್ಮೆ ಶೇ.10 ರಷ್ಟು ಹೆಚ್ಚಿಸಿ ನಿಗದಿ ಪಡಿಸಲಾಗುವದು.
8. ಬಾಡಿಗೆದಾರರು ಗುತ್ತಿಗೆ ಅವಧಿ ಪೂರ್ಣಗೊಳ್ಳುವ ಮೊದಲೇ ಮಳಗೆಯನ್ನು ತೆರವುಗೊಳಸಲು ಇಚ್ಚಿಸಿದಲ್ಲಿ ಮರುಪಾವತಿ ಠೇವಣಿಯನ್ನು ಈ ಕೆಳಕಂಡಂತೆ ಪಾವತಿಸತಕ್ಕದ್ದು.
    1) ೩ ವರ್ಷದೊಳಗೆ ಮಳಗೆಯನ್ನು ತೆರವುಗೊಳಸಲು ಇಚ್ಚಿಸಿದಲ್ಲಿ ಶೇ. ೫೦ ರಷ್ಟು ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಬಾಕಿ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವದು.
    2) ೩ ರಿಂದ 6 ವರ್ಷದೊಳಗೆ ಮಳಗೆಯನ್ನು ತೆರವುಗೊಳಸಲು ಇಚ್ಚಿಸಿದಲ್ಲಿ, ಠೇವಣಿ ಮೊತ್ತದ ಶೇ.೩೦ ರಷ್ಟನ್ನು ಮುಟ್ಟುಗೋಲು ಹಾಕಿಕೊಂಡು ಬಾಕಿ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವದು.

3) 6 ರಿಂದ 9 ವರ್ಷದೊಳಗೆ ಮಳಗೆಯನ್ನು ತೆರವುಗೊಳಸಲು ಇಚ್ಚಿಸಿದಲ್ಲಿ, ಠೇವಣಿ ಮೊತ್ತದ ಶೇ.20 ರಷ್ಟನ್ನು ಮುಟ್ಟುಗೋಲು ಹಾಕಿಕೊಂಡು ಬಾಕಿ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವದು.

4) 9 ರಿಂದ 12 ವರ್ಷದೊಳಗೆ ಮಳಗೆಯನ್ನು ತೆರವುಗೊಳಸಲು ಇಚ್ಚಿಸಿದಲ್ಲಿ, ಠೇವಣಿ ಮೊತ್ತದ ಶೇ.10 ರಷ್ಟನ್ನು ಮುಟ್ಟುಗೋಲು ಹಾಕಿಕೊಂಡು ಬಾಕಿ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವದು.

9. ಯಶಸ್ವಿಯಾದ ಬಿಡ್‌ದಾರರು ಮಳಗೆಯನ್ನು ಸ್ವಾಧೀನ ಪಡೆದುಕೊಳ್ಳುವ ಪೂರ್ವದಲ್ಲಿ 12 ತಿಂಗಳ ಬಾಡಿಗೆ ಮೊತ್ತವನ್ನು ಭದ್ರತಾ ಠೇವಣಿಯನ್ನಾಗಿ ಈ ಕಚೇರಿಯಿಂದ ಸೂಚಿಸುವ ದಿನಾಂಕದೂಳಗಾಗಿ ಮುಂಗಡವಾಗಿ ಪಾವತಿಸತಕ್ಕದ್ದು.

10. ಪ್ರತಿ ತಿಂಗಳ ಬಾಡಿಗೆಯನ್ನು ಮುಂದಿನ ತಿಂಗಳ 5ನೇ ತಾರೀಖಿನೊಳಗಾಗಿ ಪಾವತಿ ಮಾಡತಕ್ಕದ್ದು, ತಪ್ಪಿದಲ್ಲಿ ಪ್ರತಿ ತಿಂಗಳಾಂತ್ಯದ ಬಾಕಿ ಮೊತ್ತಕ್ಕೆ ಶೇ.2 ರಷ್ಟು ಬಡ್ಡಿಯನ್ನು ವಿಧಿಸಲಾಗುವದು.

11. ಒಂದು ವೇಳೆ 6 ತಿಂಗಳಗಿಂತ ಹೆಚ್ಚು ಅವಧಿ ಭಾಡಿಗೆ ಪಾವತಿಸುವಲ್ಲಿ ವಿಫಲವಾದಲ್ಲಿ ಕರಾರು ಪತ್ರವನ್ನು ವಜಾ ಮಾಡಿ 12 ತಿಂಗಳ ಮುಂಗಡವಾಗಿ ಪಾವತಿಸಿದ ಮಳಗೆ ಬಾಡಿಗೆ ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವದು.

12. ಬಾಡಿಗೆದಾರರು ಮಳಗೆಯನ್ನು ಮರು ಗುತ್ತಿಗೆ ನೀಡಿದಲ್ಲಿ ಕರಾರು ಪತ್ರವನ್ನು ವಜಾ ಮಾಡಿ ಠೇವಣಿ ಹಾಗೂ ಮುಂಗಡ ಪಾವತಿ ಬಾಡಿಗೆ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು.

13. ಬಾಡಿಗೆದಾರರು ಮರಣ ಹೊಂದಿದಲ್ಲಿ ವಾರಸುದಾರರ ಸದಸ್ಯರು ಪ್ರಮಾಣ ಪತ್ರವನ್ನು ಸಲ್ಲಿಸುವದು ಹಾಗೂ ಕುಟುಂಬದ ಒಪ್ಪಿಗೆಯ ಮೇರೆಗೆ ಕುಟುಂಬದಲ್ಲಿರುವ ಒಬ್ಬರ ಹೆಸರಿಗೆ ವರ್ಗಾವಣೆ ಮಾಡಲಾಗುವದು.

14. ಒಂದು ವೇಳೆ ಕುಟುಂಬ ವಾರಸುದಾರರು ಇಲ್ಲದೆ ಇದ್ದಲ್ಲಿ ಬೇರೆಯವರೊಂದಿಗೆ ಕರಾರು ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ಮರುಪಾವತಿ ಠೇವಣಿ ಮೊತ್ತದ ಜೊತೆಗೆ ಹೆಚ್ಚುವರಿಯಾಗಿ ಒಮ್ಮೆ ಶೇ.50 ರಷ್ಟು ಮರು ಪಾವತಿ ಠೇವಣಿ ಮೊತ್ತವನ್ನು ಮರು ಪಾವತಿ ಇಲ್ಲದ ವರ್ಗಾವಣೆ ಶುಲ್ಕವನ್ನಾಗಿ ಪಾವತಿಸುವದು.

15. ಬಾಡಿಗೆದಾರರು ಅನಾರೋಗ್ಯದಿಂದ ಮಳಗೆಯನ್ನು ನಡೆಸಲು ಸಾಧ್ಯವಾಗದಿದ್ದಲ್ಲಿ, ಬಾಡಿಗೆದಾರರ ಒಪ್ಪಿಗೆ ಪಡೆದು ಕರಾರು ಪತ್ರವನ್ನು ಕುಟುಂಬದ ಸದಸ್ಯರಾದ ಪತ್ನಿ/ಪತಿ ಅಥವಾ ಮಗ/ಮಗಳ ಹೆಸರಿಗೆ ವರ್ಗಾಯಿಸಲಾಗುವದು.

16. ಬಾಡಿಗೆದಾರರು ಕಡ್ಡಾಯವಾಗಿ ಪ್ರತಿ ವರ್ಷ ಪುರಸಭೆಗೆ ಆಸ್ತಿ ತೆರಿಗೆ, ನೀರು ಬಳಕೆ ಶುಲ್ಕ ಹಾಗೂ ಘನ ತಾಜ್ಯ ನಿರ್ವಹಣಾ ಶುಲ್ಕವನ್ನು ಪಾವತಿಸತಕ್ಕದ್ದು,

17. ಬಾಡಿಗೆದಾರರು ಬಳಕೆ ಮಾಡಿದ ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ತಪ್ಪದೇ ನಿಗದಿತ ಅವಧಿಯಲ್ಲಿ ಹೆಸ್ಕಾಂ ಸಂಸ್ಥೆಗೆ ಪಾವತಿಸುವದು. ಮತ್ತು ಇತರೆ ಸೌಲಭ್ಯಗಳನ್ನು ಪಡೆದುಕೊಂಡಲ್ಲಿ ಸಂಬಂಧಿಸಿದ ಸಂಸ್ಥೆಗಳಿಗೆ ಶುಲ್ಕ ಪಾವತಿಸುವದು ಬಾಡಿಗೆದಾರರ ಜವಾಬ್ದಾರಿಯಾಗಿರುತ್ತದೆ. ತಪ್ಪಿದಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುವದು.

18. ಬಾಡಿಗೆದಾರರು ಮಳಗೆಯಲ್ಲಿ ಯಾವುದೇ ಉದ್ಯಮವನ್ನು ಪ್ರಾರಂಭಿಸುವ ಪೂರ್ವದಲ್ಲಿ ಪುರಸಭೆಯಿಂದ ಉದ್ಯಮ ಪರವಾನಿಗೆಯನ್ನು ಪಡೆದುಕೊಂಡ ನಂತರ ವ್ಯಾಪಾರವಹಿವಾಟನ್ನು ಪ್ರಾರಂಭಿಸತಕ್ಕದ್ದು ಅಲ್ಲದೇ ಪುರಸಭೆಯಿಂದ ಪಡೆದ ಉದ್ಯಮ ಪರವಾನಿಗೆಯು ಬಾಡಿಗೆದಾರರು ವ್ಯಾಪಾರ ಮಾಡಲು ಉದ್ದೇಶಿಸಿರುವ ಉದ್ಯಮಕ್ಕೆ ಸಂಬಂಧಿಸಿದಂತೆ ಅನ್ಯ ಸಕ್ಷಮ ಪ್ರಾಧಿಕಾರದಿಂದ ಪರವಾನಿಗೆಯನ್ನು ಪಡೆಯಬೇಕಾಗಿದ್ದಲ್ಲಿ ಅದನ್ನು ತಪ್ಪದೇ ಪಡೆದುಕೊಳ್ಳುವದು ಹೊರತಾಗಿ ಈ ಪರವಾನಿಗೆಯು ಅದಕ್ಕೆ ಯಾವುದೇ ರೀತಿ ವಿನಾಯಿತಿ ನೀಡಿದೆ ಎಂದು ಭಾವಿಸತಕ್ಕದ್ದಲ್ಲ. ಇದಕ್ಕೆ ತಪ್ಪಿದಲ್ಲಿ ಮಂಜೂರಾದ ಮಳಗೆಯನ್ನು ರದ್ದುಪಡಿಸಿ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಪುರಸಭೆಯ ತಾಬಾಕೆ ತೆಗೆದುಕೊಳ್ಳಲಾಗುವುದು.

19. ಬಾಡಿಗೆದಾರರು ಮಳಿಗೆಯಲ್ಲಿ ವ್ಯಾಪಾರ ಮಾಡಲು ಉದ್ದೇಶಿಸಿರುವ ಉದ್ಯಮದ ಬಗ್ಗೆ ಯಾವುದೇ ರೀತಿ ಸಾರ್ವಜನಿಕರಿಂದ ತಕರಾರು ಉಂಟಾದಲ್ಲಿ ಪುರಸಭೆಯಿಂದ ಪರಿಶೀಲಿಸಿ ಸೂಕ್ತ ಆದೇಶವನ್ನು ಹೊರಡಿಸಲಾಗುವದು. ಸದರಿ ಆದೇಶವನ್ನು ಬಾಡಿಗೆದಾರರು ತಪ್ಪದೇ ಪಾಲಿಸತಕ್ಕದ್ದು.

20. ಸದರಿ ಮಳಿಗೆಯನ್ನು ಯಾವುದೇ ಬಗೆಯ ಹಸಿ ಮಾಂಸ, ಮದ್ಯ ಮಾರಾಟ ಮತ್ತು ಹೊಟೇಲ್ ನಡೆಸುವದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

21. ಸದರಿ ಮಳಿಗೆಗಳ ಸಂಪೂರ್ಣ ನಿರ್ವಹಣಾ ಜವಾಬ್ದಾರಿಯನ್ನು ಪ್ರತಿ ಬಾಡಿಗೆದಾರರು ಹೊಂದಿರುತ್ತಾರೆ. ಮಾಸಿಕ ನಿರ್ವಹಣಾ ವೆಚ್ಚವಾಗಿ ನೆಲ ಮಹಡಿಯ ರಸ್ತೆಗೆ ಅಭಿಮುಖವಾಗಿರುವ ಮಳಿಗೆದಾರರು ಮಾಸಿಕ ರೂ ೫೦೦.೦೦, ಮೊದಲನೇ ಮಹಡಿಯ ರಸ್ತೆಗೆ ಅಭಿಮುಖವಾಗಿರುವ ಮಳಿಗೆಗಳು ಮಾಸಿಕ ರೂ ೪೦೦.೦೦ ಮತ್ತು ಮೊದಲನೇ ಮಹಡಿಯ ರಸ್ತೆಗೆ ಅಭಿಮುಖವಲ್ಲದ ಮಳಿಗೆಗಳು ಮಾಸಿಕ ರೂ ೩೦೦.೦೦ ಗಳನ್ನು ಪಾವತಿಸುವದು ಕಡ್ಡಾಯವಾಗಿರುತ್ತದೆ. ಸದರೀ ಮೊತ್ತವನ್ನು ಮಳಿಗೆಯ ದುರಸ್ತಿಗಾಗಿ ಬಳಕೆ ಮಾಡಲಾಗುವದು.

22. ಮಳಿಗೆ ದುರಸ್ಥಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಬಾಡಿಗೆದಾರರು ನಿಯಮಾನುಸಾರ 10 ಜನ ಪ್ರತಿನಿಧಿಗಳನ್ನು ಒಳಗೊಂಡ ಮಳಿಗೆ ಬಳಕೆದಾರರ ಸೊಸೈಟಿಯನ್ನು ರಚನೆ ಮಾಡಿಕೊಳ್ಳುವದು. ಸದರೀ ಸೊಸೈಟಿಗೆ ಅಧ್ಯಕ್ಷರು ಪುರಸಭೆ ನವಲಗುಂದ ಇವರು ಖಾಯಂ ಅಧ್ಯಕ್ಷರಾಗಿರುತ್ತಾರೆ ಮತ್ತು ಮುಖ್ಯಾಧಿಕಾರಿಗಳು ಕಾರ್ಯದರ್ಶಿಗಳಾಗಿರುತ್ತಾರೆ. ಆಗತ್ಯತೆಗೆ ಅನುಗುಣವಾಗಿ ಸಮಿತಿ ಸಭೆಯನ್ನು ಜರುಗಿಸಲಾಗುವದು. ಸಮಿತಿ ಸಭೆಯಲ್ಲಿ ಬಹುಮತ ಆಧಾರದ ಮೇಲೆ ಕೈಗೊಳ್ಳಲಾಗುವ ತೀರ್ಮಾನಗಳನ್ನು ಪುರಸಭೆಯ ಆರ್ಥಿಕ ಪರಸ್ಥಿತಿಗೆ ಅನುಗುಣವಾಗಿ ನಿಯಮಾನುಸಾರ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವದು.

23. ಸದರಿ ಮಳಿಗೆಗಳ ವ್ಯಾಪ್ತಿಯಲ್ಲಿ ಯಾವುದೇ ಬಗೆಯ ಅನೈತಿಕ ಚಟುವಟಿಕೆಗಳು ನಡೆಯದಂತೆ ಹಾಗೂ ಸುರಕ್ಷತೆಯು ಹಿತದೃಷ್ಟಿಯಿಂದ 24*7 ಅವಧಿಗೆ ಮಳಿಗೆದಾರರು ಒಮ್ಮತದಿಂದ ಒಂದು ಪಾಳಿಗೆ ಅವಶ್ಯಕ ಕನಿಷ್ಟ 2 ರಿಂದ 3 ಜನ ಭದ್ರತಾ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವದು. ಈ ಸಂಬಂಧಿಸಿದ ವೇತನ ಮತ್ತು ನಿರ್ವಹಣಾ ವೆಚ್ಚಗಳನ್ನು ಮಳಿಗೆ ಬಾಡಿಗೆದಾರರೆ ಪಾವತಿಸತಕ್ಕದ್ದು.

24. ಬಾಡಿಗೆ ಮೊತ್ತದೊಂದಿಗೆ ಅಗತ್ಯ ಜಿ.ಎಸ್.ಟಿ/ಐ.ಟಿ ಮುಂತಾದ ತೆರಿಗೆಗಳನ್ನು ಕಡ್ಡಾಯವಾಗಿ ಪಾವತಿಸುವದು ಹಾಗೂ ಕಾಲಕಾಲಕ್ಕೆ ಸರ್ಕಾರದ ಆದೇಶ/ಸುತ್ತೋಲೆ/ನಿರ್ದೇಶನದಂತೆ ಸೂಚಿಸಬಹುದಾದ ತೆರಿಗೆ/ಶುಲ್ಕಗಳನ್ನು ಕಡ್ಡಾಯವಾಗಿ ಹೆಚ್ಚುವರಿಯಾಗಿ ಪಾವತಿಸತಕ್ಕದ್ದು.

25. ವಾಣಿಜ್ಯ ಸಂಕೀರ್ಣ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ವಿಂಗಡಣೆ ಮಾಡಿ ಪುರಸಭೆ ವಾಹನಗಳಿಗೆ ನೀಡುವದು ಹಾಗೂ ಯಾವುದೇ ಮಳಿಗೆಗಳ ಮುಂಭಾಗದಲ್ಲಿ ಯಾವುದೇ ರೀತಿ ಕಸ ಸಂಗ್ರಹಣೆಯಾಗಿರುವದು ಕಂಡು ಬಂದಲ್ಲಿ ಸಂಬಂಧಿಸಿದ ಮಳಿಗೆದಾರರಿಗೆ ನಿಯಮಾನುಸಾರ ದಂಡ ವಿಧಿಸಲಾಗುವದು.

26. ಬಾಡಿಗೆದಾರರು ಯಾವುದೇ ರೀತಿ ಬಾಡಿಗೆ ಮೊತ್ತವನ್ನು ಬಾಕಿ ಉಳಿಸಿಕೊಂಡು ಭರಣಾ ಮಾಡಲು ವಿಫಲವಾದಲ್ಲಿ ಸದರೀ ಮೊತ್ತವನ್ನು ಭೂ ಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವದು.

27. ಯಾವುದೇ ಕಾರಣಕ್ಕೆ ಯಾವುದೇ ಬಾಡಿಗೆದಾರರು ನಿಷೇದಿತ ವ್ಯಾಪಾರ/ವಸ್ತುಗಳನ್ನು ಮಾರಾಟ/ದಾಸ್ತಾನು ಮಾಡುವದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಇದಕ್ಕೆ ವ್ಯತಿರಿಕ್ತವಾಗಿ ವ್ಯಾಪಾರ ವಹಿವಾಟು ಮಾಡಿದಲ್ಲಿ ರೂ. 1.೦೦ ಲಕ್ಷ (ಒಂದು ಲಕ್ಷ) ದಂಡ ವಿಧಿಸಲಾಗುವುದು ಹಾಗೂ ಕಾನೂನು ರೀತಿ ಕ್ರಮ ಜರುಗಿಸಲಾಗುವದು.

28. ಪುರಸಭೆಯಿಂದ ಹಂಚಿಕೆ/ಕಬ್ಜಾ ನೀಡಲಾದ ಮಳಿಗೆಯನ್ನು ಯಥಾವತ್ತಾಗಿ ಬಳಕೆ ಮಾಡುವದು ಯಾವುದೇ ರೀತಿ ಮೂಲ ಸ್ವರೂಪಕ್ಕೆ ಧಕ್ಕೆ ಬದಲಾವಣೆ ಮಾಡತಕ್ಕದ್ದಲ್ಲ, ವ್ಯಾಪಾರ ವಹಿವಾಟಿಗೆ ಅನುಗುಣವಾಗಿ ಆಂತರಿಕವಾಗಿ ಯಾವುದೇ ರೀತಿಯ ತಾತ್ಕಾಲಿಕ ನಿರ್ಮಾಣಗಳನ್ನು (ಇಟ್ಟಿಗೆ ಮತ್ತು ಸಿಮೆಂಟ ಬಳಸದೆ) ಪುರಸಭೆಯ ಅನುಮತಿಯೊಂದಿಗೆ ಮಾಡಿಕೊಳ್ಳತಕ್ಕದ್ದು.

29. ಹಂಚಿಕೆಯಾದ ಮಳಿಗೆಯ ಕ್ಷೇತ್ರವನ್ನು ಹೊರತುಪಡಿಸಿ ಅನಧಿಕೃತವಾಗಿ ಯಾವುದೇ ಮೇಲ್ಚಾವಣಿಯಾಗಲಿ ಹಾಗೂ ತಾತ್ಕಾಲಿಕ ನಿರ್ಮಾಣಗಳನ್ನು ಬೆಳೆಸತಕ್ಕದ್ದಲ್ಲ.

30. ಬಾಡಿಗೆದಾರರು ಉದ್ಯಮ/ವ್ಯಾಪಾರಕ್ಕಾಗಿ ಯಾವುದೇ ತರಹದ ಸಾಲಗಳನ್ನು ಪಡೆದುಕೊಂಡು ಸದರಿ ಸಾಲದ ಮರುಪಾವತಿ ಕುರಿತು ಯಾವುದೇ ರೀತಿ ಕ್ರಮಗಳಿಗೆ ಪುರಸಭೆಯು ಜವಾಬ್ದಾರವಾಗಿರುವದಿಲ್ಲ.

31. ಯಾವುದೇ ಕಾಲಕ್ಕೆ ಯಾವುದೇ ರೀತಿ ಮುನ್ಸೂಚನೆ ನೀಡದೆ ಬಾಡಿಗೆ ಅವಧಿಯನ್ನು ಮೊಟಕುಗೊಳಿಸುವ ಅಧಿಕಾರವನ್ನು ಪುರಸಭೆಯು ಹೊಂದಿರುತ್ತದೆ ಮತ್ತು ಈ ಸಂಬಂಧಿಸಿದಂತೆ ಪುರಸಭೆಯು ಯಾವುದೇ ರೀತಿ ಪರಿಹಾರವನ್ನು ನೀಡಲು ಜವಾಬ್ದಾರಿಯಾಗಿರುವುದಿಲ್ಲ.

32. ಬಿಡ್‌ನಲ್ಲಿ ಭಾಗವಹಿಸುವವರು ನವಲಗುಂದ ಪುರಸಭೆಗೆ ಯಾವುದೇ ರೀತಿ ಬಾಕಿದಾರರು ಇರಬಾರದು ಈ ಬಗ್ಗೆ ಪುರಸಭೆ ನವಲಗುಂದ ಇವರಿಂದ ಪಡೆದ ಬೇಬಾಕಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರಪಡಿಸಬೇಕು.

33. ಬಿಡ್‌ನಲ್ಲಿ ಭಾಗವಹಿಸುವವರು ಒಂದು ಸ್ಥಿರ ಆಸ್ತಿಯನ್ನು ಪುರಸಭೆಗೆ ನೋಂದ ಮಾಡಿಸಿಕೊಡಬೇಕು.ಸದರಿ ಆಸ್ತಿಗೆ ಸಂಬಂಧಿಸಿದಂತೆ ಮಳಿಗೆ ಬಾಕಿಯನ್ನು ಋಣಭಾರ ಕಾಲಂನಲ್ಲಿ ಕಾಲ ಕಾಲಕ್ಕೆ ದಾಖಲಿಸಲು ಮತ್ತು ಸದರ ಆಸ್ತಿಯನ್ನು ಪುರಸಭೆ ಎನ್.ಓ.ಸಿ. ಇಲ್ಲದೇ ಮಾರಾಟ/ವರ್ಗಾವಣೆ ಮಾಡತಕ್ಕದ್ದಲ್ಲ. ಒಂದು ವೇಳೆ ಬಿಡ್‌ದಾರನ ಹೆಸರಿಗೆ ಯಾವುದೇ ಆಸ್ತಿ ಇಲ್ಲದೇ ಇದ್ದಲ್ಲಿ ಅವರ ಪರವಾಗಿ ಜಾಮೀನುದಾರರು ಒಬ್ಬರ ಆಸ್ತಿಯನ್ನು ನೋಂದ ಮಾಡಿಕೊಡಬಹುದಾಗಿದೆ.

34. ಲಾವು ಮಂಜೂರಾದವರು ಮಳಿಗೆ ಪಡೆದುಕೊಳ್ಳಲು ನಿರಾಕರಿಸಿದಲ್ಲಿ ಅಂಥವರ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

35. ಲಾವು ಮಂಜೂರ ವ ನಾಮಂಜೂರ ಮಾಡುವ ಅಧಿಕಾರ ಪುರಸಭೆ ಕಾಯ್ದಿರಿಸಿಕೊಂಡಿದೆ.

36. ಮಳಿಗೆ ಮಂಜೂರಾದವರು ಲಾವ ಮೊತ್ತಕ್ಕೆ ಅನುಗುಣವಾಗಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಕರಾರುಗಳನ್ನು ಬರೆಸಿ ಕೊಡತಕ್ಕದ್ದು.

37. ಪುರಸಭೆಯು ಕಾಲ ಕಾಲಕ್ಕೆ ವಿಧಿಸುವ ಷರತ್ತುಗಳಿಗೆ ಬದ್ದರಾಗಿರುವದು.

ಮುಖ್ಯಾಧಿಕಾರಿ
ಪುರಸಭೆ ನವಲಗುಂದ

PD – 15

ಪುರಸಭೆ ಕಾರ್ಯಾಲಯ ನವಲಗುಂದ

ನಂ:ಪುಸನ/ಆ.ವಿ/2026–27 ದಿ.10.04.2026

ಸಾರ್ವಜನಿಕ ಪ್ರಕಟಣೆ

ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲ ವ್ಯಾಪಾರಸ್ಥರಿಗೆ ಈ ಮೂಲಕ ತಿಳಯಪಡಿಸುವುದೆನೆಂದರೆ ಪುರಸಭೆಯು ಸಾರ್ವಜನಿಕರಿಗೆ ಒದಗಿಸಬೇಕಾದ ಮೂಲಭೂತ ಸೌಕರ್ಯ ಮತ್ತು ಆರ್ಥಿಕತೆಯನ್ನು ಗಮನದಲ್ಲಿರಿಸಿಕೊಂಡು ದಿ: 27.01.2026 ರಂದು ಸಾಮಾನ್ಯ ಸಭೆಯ ಠರಾವು ನಂ 100 ರಲ್ಲಿ, ನವಲಗುಂದ ಪುರಸಭೆಯ ವ್ಯಾಪ್ತಿಯ ಉದ್ಯಮ ಶುಲ್ಕಗಳನ್ನು ಈ ಕೆಳಕಾಣಿಸಿದ ವಿವರಗಳಂತೆ ಪರಿಷ್ಕರಿಸಿ ನಿಗದಿಪಡಿಸಿದೆ.ಈ ಪ್ರಕಟಣೆ ಹೊರಡಿಸಿದ 15 ದಿನಗಳಲ್ಲಿ ಬಾಧಿತ ವ್ಯಕ್ತಿಗಳು ಮುಖ್ಯಾಧಿಕಾರಿ ಪುರಸಭೆ ನವಲಗುಂದ ಇವರಿಗೆ ಸ್ವೀಕೃತವಾಗುವಂತೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಅವಧಿ ಮೀರಿದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಅ.ಸಂ	ಉದ್ದಿಮೆಗಳ ವಿವರ	ಪ್ರಸುತ್ತ ದರ	ಪರಿಷ್ಕರಿಸಿದ ದರ
1	ರಂದ್ರಾ ಕೊರೆಯುವ ಕೆಲಸ(ಬಡಿಗೆತನ)	800	1000
2	ಬಾಂಡೆ ಸಾಮಾನು ಅಂಗಡಿ	1500	1800
3	ರೆಸ್ಟೋರೆಂಟ್ (ಎ ವರ್ಗ)	–	5500
4	4 ರೆಸ್ಟೋರೆಂಟ್ (ಬಿ ವರ್ಗ)	–	4000
5	ರೆಸ್ಟೋರೆಂಟ್(ಸಿ ವರ್ಗ)	1200	4500
6	ಗಡಿಯಾರ ರಿಪೇರಿ ಅಂಗಡಿ	800	800
7	ತೆಂಗಿನಕಾಯಿ ವ್ಯಾಪಾರ	1000	1500
8	ಹಿಟ್ಟಿನ ಗಿರಣಿ (ಎ ವರ್ಗ)	–	2000
9	ಹಿಟ್ಟಿನ ಗಿರಣಿ (ಬಿ ವರ್ಗ)	–	1500
10	ಹಿಟ್ಟಿನ ಗಿರಣಿ (ಸಿ ವರ್ಗ)	600	1000
11	ಅಡಿಕೆ ವ್ಯಾಪಾರ	600	1000
12	ಚಹಾದ ಅಂಗಡಿ	800	1000
13	ಮೆಡಿಕಲ್ ಶಾಪ್	2000	3000
14	ಖಾನಾವಳಿ ಸಸ್ಯಹಾರಿ	1000	2000
15	ಖಾನಾವಳಿ ಮಾಂಸಹಾರಿ	1500	2500
16	ಖಾನಾವಳಿ ಸಸ್ಯಹಾರಿ ಮತ್ತು ಮಾಂಸಹಾರಿ	1500	3000
17	ಸಿಮೆಂಟ್ ಸಾಮಗ್ರಿ ಉತ್ಪಾದನೆ ಹಾಗೂ ಮಾರಾಟ	5000	5500
18	ಅಡಿಕೆ ವ್ಯಾಪಾರ & ಕಾಡುತ್ಪತ್ತಿ ಖರೀದಿ ಹಾಗೂ ಮಾರಾಟ	600	1000
19	ಎಣ್ಣೆ ಉತ್ಪನ್ನಗಳ ತಯಾರಿಕ ಘಟಕ	800	1200

ಅ.ಸಂ	ಉದ್ದಿಮೆಗಳ ವಿವರ	ಪ್ರಸುತ್ತ ದರ	ಪರಿಷ್ಕರಿಸಿದ ದರ
20	ಜುವೆಲ್ಯರಿ ವರ್ಕ್ಸ್	2000	3500
21	ಕಿರಾಣಿ & ಜನರಲ್ ಸ್ಟೋರ್ಸ್	1500	2000
22	ಹೋಮ್ ಪ್ರೊಡಕ್ಟ್ ತಯಾರಿಕಾ ಹಾಗೂ ಮಾರಾಟ ಘಟಕ ವ್ಯವಹಾರ	1500	2500
23	ಸಸ್ಯಹಾರಿ & ಮಾಂಸಹಾರಿ ಹೋಟೆಲ್	1500	2500
24	ಬೇಕರಿ (ವರ್ಗ ಎ)	2000	3500
25	ಬೇಕರಿ (ವರ್ಗ ಬಿ)	1500	2500
26	ಬೇಕರಿ (ವರ್ಗ ಸಿ)	1500	2000
27	ಬ್ಯಾನರ್ ಪ್ರಿಂಟಿಂಗ್	1500	2000
28	ಕಟ್ಟಡ ಸಾಮಾಗ್ರಿಗಳ ಮಾರಾಟ	1500	2500
29	ಹಾರ್ಡ್‌ವೇರ್ ಅಂಗಡಿ	1500	2500
30	ಪ್ಲಂಬಿಂಗ್ ಕೆಲಸ	1000	1500
31	ಹೋಟೆಲ್ & ವಸತಿ ಗೃಹ (ವರ್ಗ ಎ)	5000	6000
32	ಹೋಟೆಲ್ & ವಸತಿ ಗೃಹ (ವರ್ಗ ಬಿ)	4500	5500
33	ಹೋಟೆಲ್ & ವಸತಿ ಗೃಹ(ವರ್ಗ ಸಿ)	4000	5000
34	ಹೋಳಿಗೆ ಬಿಡಿಯಂತ್ರ, ಮಿನಿ ಜೆನರೇಟರ್ ಸಂಬಂಧಿಸಿದ ಮಾರಾಟ ಮತ್ತು ಸರ್ವಿಸ್	1000	1500
35	ಉಪ್ಪಿನಕಾಯಿ ಹಾಗೂ ಗೃಹಉಪಯೋಗಿ ವಸ್ತುಗಳ ವ್ಯಾಪಾರ	1000	1500
36	Plumber	1000	1500
37	ಕಟ್ಟಗೆ ಅಡ್ಡೆ	1000	1500
38	ಕಂಪ್ಯೂಟರ್ ಸೇಲ್ಸ್ ಮತ್ತು ಸರ್ವೀಸ್	1500	2500
39	ಕಿರಾಣಿ ಅಂಗಡಿ (ವರ್ಗ ಎ)	–	3000
40	ಕಿರಾಣಿ ಅಂಗಡಿ (ವರ್ಗ ಬಿ)	–	2000
41	ಕಿರಾಣಿ ಅಂಗಡಿ (ವರ್ಗ ಸಿ)	–	1500
42	ದ್ವಿಚಕ್ರ ವಾಹನಗಳ ಗ್ಯಾರೇಜ್ (ವರ್ಗ ಎ)	3000	3500
43	ದ್ವಿಚಕ್ರ ವಾಹನಗಳ ಗ್ಯಾರೇಜ್ (ವರ್ಗ ಬಿ)	2500	3000
44	ದ್ವಿಚಕ್ರ ವಾಹನಗಳ ಗ್ಯಾರೇಜ್ (ವರ್ಗ ಸಿ)	2000	2500
45	ಫೋಟೋ ಸ್ಟುಡಿಯೋ	800	1500
46	ಸ್ಟೀಲ್ ಅಂಗಡಿ (ದೊಡ್ಡ)	1500	2000
47	ಹಿಟ್ಟಿನ ಗಿರಣಿ (ಮಧ್ಯಮ)	800	1000
48	Printing press	1500	2500

ಅ.ಸಂ	ಉದ್ದಿಮೆಗಳ ವಿವರ	ಪ್ರಸುತ್ತ ದರ	ಪರಿಷ್ಕರಿಸಿದ ದರ
49	ವೆಲ್ಡಿಂಗ್ ಶಾಪ್	800	1500
50	ಡಾಬಾ	4000	5000
51	ಕಂಪ್ಯೂಟರ್ ತರಭೇತಿ ಕೇಂದ್ರ	600	1500
52	ಮೆಡಿಕಲ್ ಮತ್ತು ಜನರಲ್ ಸ್ಟೋರ್ಸ್	2000	3000
53	ಜ್ಯೂಸ್ ಸೆಂಟರ್	1000	1500
54	ಜನತಾ ಬಜಾರ್	3000	3500
55	ಗೋಣಿ ಚೀಲ ಮಾರಾಟ	800	1500
56	ಆಟೋಮೊಬೈಲ್	2000	2500
57	ಟೈರ್ ಅಂಗಡಿ	1000	1200
58	ಕನ್ನಡಕಗಳ ಮಾರಾಟ ಅಂಗಡಿ	500	1000
59	ಫ್ಲೋರ್ ಮಿಲ್(ಹಿಟ್ಟಿನ ಗಿರಣಿ)	600	1200
60	ಹಣ್ಣಿನ ಮಂಡಿ	1500	2000
61	ಸ್ಟೇಷನರಿ	800	1500
62	ಶಾಮಿಯಾನ ಮತ್ತು ಫ್ಲವರ್ ಡೆಕೋರೇಟರ್ಸ್	2000	3000
63	ದೋಬಿ ಅಂಗಡಿ (ಡ್ರೈ ಕ್ಲೀನರ್ಸ್)	200	800
64	ಪಂಚರ್ ಅಂಗಡಿ	500	1000
65	ಟೈಲರಿಂಗ್ ಶಾಪ್	800	1500
66	ಮೊಬೈಲ್ ಅಂಗಡಿ(ಮಾರಾಟ)	1500	2000
67	ಹೋಟೆಲ್ ಮಾಂಸಹಾರಿ (ವರ್ಗ ಎ)	1500	2500
68	ಹೋಟೆಲ್ ಮಾಂಸಹಾರಿ (ವರ್ಗ ಬಿ)	1200	2000
69	ಕೇಬಲ್ ನೆಟ್‌ವರ್ಕ್	2500	3000
70	ತರಕಾರಿ ಅಂಗಡಿ	800	1500
71	ಎಲೆಕ್ಟ್ರಿಕಲ್ ಅಂಗಡಿ	1200	1800
72	ಸ್ಟೀಲ್ ಪಾತ್ರೆ ಹಾಗೂ ಇತರೆ ಗೃಹೋಪಯೋಗಿ ವಸ್ತುಗಳ ಮಾರಾಟ ಅಂಗಡಿ	1500	2000
73	ದ್ವಿ–ಚಕ್ರ ವಾಹನಗಳ ಮಾರಾಟ ಕೆಂದ್ರ (ಆಟೋ ಕನ್ಸಲ್ ಟೆಂಟ್)	1000	2500
74	ಡಿ.ಟಿ.ಪಿ. ಸೆಂಟರ್/ ಬೆರಳಚ್ಚು ಕೇಂದ್ರ	600	1200
75	ಸಲೂನ್ ಶಾಪ್	800	1500
76	ಪಾನ್ ಬೀಡ ಅಂಗಡಿ	600	1000
77	ಗೊಬ್ಬರದ ಅಂಗಡಿ	1500	2000
78	ಬ್ಯೂಟಿ ಪಾರ್ಲರ್	1000	1800

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

ಅ.ಸಂ	ಉದ್ದಿಮೆಗಳ ವಿವರ	ಪ್ರಸುತ್ತ ದರ	ಪರಿಷ್ಕರಿಸಿದ ದರ
79	ಚಿನ್ನ ಬೆಳ್ಳಿ ಕೆಲಸ/ಉದ್ದಿಮೆ	2000	3500
80	ಲೇವಾದೇವಿ/ಹಣಕಾಸು ಸಂಸ್ಥೆ (ಗಿರಿವಿ ಅಂಗಡಿ)	2500	2500
81	ಪೆಟ್ರೋಲ್ ಬಂಕ್	5000	5500
82	ವೈನ್ ಶಾಪ್ (ಮದ್ಯದ ಅಂಗಡಿ)	5000	5500
83	ಕ್ಲಿನಿಕ್ – Clinic	3000	3000
84	ಬೀಜ ಮತ್ತು ಕೀಟನಾಶಕ	1500	2000
85	ಸೋಡಾ ಪ್ಯಾಕ್ಟರಿ	–	2500
86	ಆಯಿಸ್ ಪ್ಯಾಕ್ಟರಿ	–	3000
87	ರೊಟ್ಟಿ ವ್ಯಾಪಾರ	–	1500
88	ಹೂವಿನ ಅಂಗಡಿ	–	1000
89	ಶ್ಯಾವಿಗೆ ಮಿಷನ್	–	1000
90	ಎಗ್ ರೈಸ್ ಅಂಗಡಿ (ದೊಡ್ಡದು)	–	2000
91	ಎಗ್ ರೈಸ್ ಅಂಗಡಿ (ಮಧ್ಯಮ)	–	1500
92	ದ್ವಿ–ಚಕ್ರ ವಾಹನಗಳ ಮಾರಾಟ ಮತ್ತು ಸರ್ವಿಸ್	1000	3000
93	ಮಟನ್ ಮಾರಾಟ	5000	6000
94	ಚಿಕನ್ ಮತ್ತು ಎಗ್ ಮಾರಾಟ	1500	3000
95	ಚಿಕನ್ ಮಾರಾಟ	1500	2000
96	ಎಗ್ ಮಾರಾಟ	–	1000

ಮುಖ್ಯಾಧಿಕಾರಿ
ಪುರಸಭೆ ನವಲಗುಂದ

PD – 16

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

SOMASHEKAR B E